CW.3 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.252/2012

| | |
|---|---|
| ಸಾಕ್ಷಿದಾರರ ಹೆಸರು | ಲಕ್ಷ್ಮೀಕಾಂತ ಎನ್ |
| ತಂದೆಯ ಹೆಸರು | ನರಸಿಂಹಮೂರ್ತಿ |
| ವಯಸ್ಸು | 42 ವರ್ಷ |
| ವೃತ್ತಿ | ಹೆಚ್ ಸಿ 158 ತಾವರೆಕೆರೆ ಪೋಲೀಸ್ ಠಾಣೆ |
| ವಿಳಾಸ | ತಾವರೆಕೆರೆ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 26.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ನಾನು 2008 ರಿಂದ 2013ನೇ ಇಸವಿಯವರೆಗೂ ವಿಶೇಷ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕದಲ್ಲಿ ನನ್ನ ಕರ್ತವ್ಯವನ್ನು ಪೇದೆಯಾಗಿ ನಿರ್ವಹಿಸಿರುತ್ತೇನೆ.

ಸದರಿ ಪ್ರಕರಣದಲ್ಲಿ ದಿಃ05.09.2011 ರಂದು ಚಾಸಾ-1 ರವರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಚಾಸಾ-2, ಚಾಸಾ-4 ಹಾಗೂ ನನ್ನನ್ನು ಕರೆದುಕೊಂಡು ಸದರಿಯವರು ಠಾಣಾ ವಾಹನವಾದ ಕೆಎ-42-ಜಿ-110 ರಲ್ಲಿ ಕೋಡಿಹಳ್ಳಿ ಹೋಬಳಿಯ ಕಮಲಾಪುರದೊಡ್ಡಿ ಗೆ ಹೋಗಿ ಪಂಚಾಯತಿದಾರರಾದ ಬೋಜೇಗೌಡ ಮತ್ತು ಕೃಷ್ಣರವರನ್ನು ಕರೆದುಕೊಂಡು ನಾವು ಅಲ್ಲಿಗೆ ಹೋದಂತಹ ಮಾಹಿತಿಯನ್ನು ಸದರಿಯವರಿಗೆ ತಿಳಿಸಿ ಸುಮಾರು 11.30 ಗಂಟೆ ಸಮಯದಲ್ಲಿ ಸದರಿ

ಗ್ರಾಮದ ಜಡಿಯಾನಾಯ್ಕ ಅಂದರೆ 1ನೇ ಆರೋಪಿ ಇತನ ಹಿತ್ತಲಿನ ಜಾಗದಲ್ಲಿ ದಾಳಿ ಮಾಡಲಾಗಿ ಅಲ್ಲಿದ್ದ ಇಬ್ಬರು ಅಸಾಮಿಗಳು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ಪಂಚರ ಸಮಕ್ಷಮ ಸ್ಥಳವನ್ನು ಪರಿಶೀಲನೆ ಮಾಡಿ ನೋಡಲಾಗಿ ಅಲ್ಲಿ ದೊಡ್ಡ ಮಡಿಕೆಯಲ್ಲಿ ಕಳ್ಳಭಟ್ಟಿ ಕೊಳೆ ಇರುತ್ತದೆ. ಅದನ್ನು ಪಂಚರ ಸಮಕ್ಷಮ ನಾಶ ಪಡಿಸಿ ಅಲ್ಲಿಯೇ ಇದ್ದ 10 ಲೀಟರ್ ಸಾಮರ್ಥ್ಯದ 2 ಕ್ಯಾನ್ ಗಳನ್ನು ಅಮಾನತು ಪಡಿಸಿಕೊಂಡಿದ್ದು ಅಲ್ಲೇ ಪಕ್ಕದಲ್ಲಿದ್ದ ಒಲೆಯನ್ನು ಪಂಚರ ಸಮಕ್ಷಮ ನಾಶಪಡಿಸಲಾಗಿರುತ್ತದೆ. ಓಡಿ ಹೋದ ಅಸಾಮಿಗಳ ಬಗ್ಗೆ ಪಂಚರಿಗೆ ವಿಚಾರಿಸಲಾಗಿ ಸದರಿಯವರುಗಳು ಜಡಿಯಾನಾಯ್ಕ ಬಿನ್ ಸೋಮನಾಯ್ಕ, ಶಿವಣ್ಣ ಉಃಸಾಂಬಯ್ಯ ಬಿನ್ ಸೊಂಬಯ್ಯ ಎಂದು ನಮಗೆ ತಿಳಿಸಿರುತ್ತಾರೆ. ನಂತರ ಸದರಿ ಕ್ಯಾನುಗಳಿಂದ ಕಳ್ಳಭಟ್ಟಯನ್ನು ತಲಾ 180 ಎಂಎಲ್ ನಷ್ಟು 2 ಬಾಟಲ್ ಗಳಲ್ಲಿ ತೆಗೆದುಕೊಂಡು ಎಫ್ ಎಸ್ ಎಲ್ ಕಳುಹಿಸುವ ಸಂಬಂಧ ಅದನ್ನು ಸೀಲ್ ಮಾಡಿ ಸಿ ಕೆ ಎಂಬ ಗುರುತನ್ನು ಮಾಡಲಾಗಿರುತ್ತದೆ. ನಂತರ ಅಮಾನತು ಪಡಿಸಿಕೊಂಡ ವಸ್ತುವನ್ನು ನಮ್ಮ ಠಾಣೆಗೆ ಹಾಗೂ ಮೇಲಾಧಿಕಾರಿಗೆ ಒಪ್ಪಿ ಸಲು ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಮಹಜರ್ ನ್ನು 11.30 ಗಂಟೆಯಿಂದ 1 ಗಂಟೆಯವರೆಗೂ ಮಾಡಲಾಗಿರುತ್ತದೆ.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಈ ಸಂಬಂಧ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ನಾನು ನೀಡಿರುವ ಹೇಳಿಕೆಯಲ್ಲಿ ನನ್ನನ್ನು ಪಂಚರಾಗಿ ಬರಲು ಕೇಳಿರುತ್ತಾರೆಂದು ನಾನು ಹೇಳಿರುವುದಿಲ್ಲ. ನಾನು ನನ್ನ ಅಧಿಕಾರಿಯೊಂದಿಗೆ ದಾಳಿ ಮಾಡಲು ಹೋಗಿರುತ್ತೇನೆ. ನಾನು ಹೋದ ಸ್ಥಳದಲ್ಲಿ ಆರೋಪಿತರು ಯಾವುದೇ ಕಳ್ಳಭಟ್ಟಿಯನ್ನು ತಯಾರು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಹಿರಿಯ ಅಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೇ ಇರುವುದರಿಂದ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಳ್ಳದೇ ಇರುವುದರಿಂದ ಅಲ್ಲಿಂದ ಯಾವುದೇ ಕಳ್ಳಭಟ್ಟಿ ಸಾರಾಯಿಯನ್ನು ಎಫ್ ಎಸ್ ಎಲ್ ಗೆ ಕಳುಹಿಸಲು ಅಮಾನತು ಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**

CW.3 PW.3